ಅಧ್ಯಕ್ಷರು :— ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ಹೀಗೆ ಎಲ್ಲಾ ಸಚಿವರ ಪರವಾಗಿ ಮಾನ್ಯ ಬೈರೇಗೌಡರು ಒಬ್ಬರೇ ಕಾಗದಪತ್ರಗಳನ್ನು ಮಂಡಿಸುತ್ತಿದ್ದಾರೆ. ಯಾರಾದರೂ ಒಬ್ಬಿಬ್ಬರು ಸದನದಲ್ಲಿ ಇರದಿದ್ದರೆ ಅಂಥವರ ಪರವಾಗಿ ಇವರು ಮಂಡಿಸಲು ಅಡ್ಡಿ ಇಲ್ಲ. ಅದನ್ನು ಬಿಟ್ಟು ಇಲ್ಲಿ ಇರುವವರ ಪರವಾಗಿಯೂ ಹೀಗೆ ಒಬ್ಬರು ಮಂಡಿಸುವುದು ಸರಿಯೇ? ಹಾಗಾದರೆ ರೂಲ್ಸ್, ಪ್ರೊಸೀಜರ್ಸ್ ಮುಂತಾಗಿ ಏಕೆ ಇರಬೇಕು?

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೇ, ಇದು ಸರಿಯೇ ಎಂಬ ಬಗ್ಗೆ ತಾವು ಅಪ್ಪಣೆ ಕೊಡಿಸಬೇಕು. ಯಾರಾದರೂ ಸದನದಲ್ಲಿ ಇರಲಿಲ್ಲ ಅಂದರೆ ಅವರ ಪರವಾಗಿ ಇನ್ನೊಬ್ಬರು ಮಂಡಿಸಬಹುದು. ಇಲ್ಲಿ ಇರುವವರ ಪರವಾಗಿಯೂ ಕೂಡ ಇವರು ಅವರ ಹೆಸರಿನಲ್ಲಿರತಕ್ಕಂಥ ಕಾಗದಪತ್ರಗಳನ್ನು ಮಂಡಿಸುತ್ತೇನೆ ಎಂದು ಹೇಳಿದರೆ ಎಷ್ಟು ಅಪಹಾಸ್ಯವಾಗುತ್ತದೆ? ಇದು ಸರಿ ಅಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ಅಧ್ಯಕ್ಷರೇ, ಹೇಗೂ ಖಾತೆ ರಹಿತ ಮಂತ್ರಿಗಳು ಇದ್ದಾರಲ್ಲ? ಅವರಿಗೆ ಈ ತರಹದ ಕೆಲಸಗಳನ್ನು ಕೊಟ್ಟುಬಿಡಲಿ..

ಅಧ್ಯಕ್ಷರು :— ಶ್ರೀರಾಮರೆಡ್ಡಿಯವರು ಹೇಳಿದ್ದು ಒಳ್ಳೆಯ ಸಜೆಶನ್....

4. ವರದಿಯನ್ನೊಪ್ಪಿಸುವುದು.

ಶ್ರೀ ಕೆ. ಶರಣಪ್ಪ (ಅಧ್ಯಕ್ಷರು, ಹಕ್ಕು ಬಾಧ್ಯತಾ ಸಮಿತಿ) :— ಮಾನ್ಯ ಅಧ್ಯಕ್ಷರೇ, ಹಕ್ಕು ಬಾಧ್ಯತಾ ಸಮಿತಿಯ ನಾಲ್ಕನೇ ವರದಿಯನ್ನು ತಮ್ಮ ಅನುಮತಿ ಪಡೆದು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು :— ವರದಿಯನ್ನು ಒಪ್ಪಿಸಲಾಯಿತು. ಮಾನ್ಯ ಶ್ರೀರಾಮರೆಡ್ಡಿಯವರು ಕೊಟ್ಟ ಸೂಚನೆ ನಿನ್ನೆ ಬಂದಿದೆ, ಅದನ್ನು ಮುಂದಕ್ಕೆ ತೆಗೆದುಕೊಳ್ಳುತ್ತೇನೆ.

5. ಅಧ್ಯಕ್ಷರ ಅಪ್ಪಣೆ ಮೇರೆಗೆ.

ರಾಜ್ಯದಲ್ಲಿ ಗ್ರಾಮಪಂಚಾಯಿತಿ ಚುನಾವಣೆಗಳನ್ನು ಮುಂದೂಡಿರುವುದು.

+ಬಿ.ಎಸ್. ಯಡಿಯೂರಪ್ಪ :— ಮಾನ್ಯ ಅಧ್ಯಕ್ಷರೇ, ಪಂಚಾಯತ್ ಚುನಾವಣೆಗಳನ್ನು ರಾಜ್ಯದಲ್ಲಿ ಮುಂದೂಡಿರುವ ಬಗ್ಗೆ, ಸುಗ್ರೀವಾಜ್ಞೆಯನ್ನು ಮಾಡಿರುವುದರ ಬಗ್ಗೆ, ಹಾಗೂ ಅಲ್ಲಿ ಎಲ್ಲಾ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿರುವಂಥ ಪ್ರಮುಖ